**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **280** |
| **ಸದಸ್ಯರ ಹೆಸರು** | : | **ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **21-12-2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಂದಾಯ ಸಚಿವರು** |

| | ಪ್ರಶ್ನೆ | ಉತ್ತರ |
|---|---|---|
| (ಅ) | ವಿಜಯಪುರ ಜಿಲ್ಲೆಯ ಡೋಣಿ ನದಿಯು ತುಂಬಿ ಹರಿದು ಜಿಲ್ಲೆಯ ತ್ರಿಕೋಟಾ ಬಬಲೇಶ್ವರ,ವಿಜಯಪುರ, ಬಸವನ ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕುಗಳಲ್ಲಿ ಒಟ್ಟು 35 ಸಾವಿರ ಹೆಕ್ಟೇರ್ ಪ್ರದೇಶಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ, ಅತಿವೃಷ್ಟಿ /ಡೋಣಿ ನದಿ ಪ್ರವಾಹ ಪಾತ್ರದ ತಾಲ್ಲೂಕುಗಳು ಒಳಗೊಂಡಂತೆ ಕಂದಾಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ಜಂಟಿ ವರದಿಯನ್ವಯ 34170.19 ಹೆ. ಪ್ರದೇಶ ಹಾನಿಯಾಗಿರುತ್ತದೆ. |
| (ಆ) | ಜಿಲ್ಲೆಯಲ್ಲಿ ಸತತ ಸುರಿದ ಮಳೆಯಿಂದಾಗಿ ಡೋಣಿ ನದಿಯ ಪ್ರವಾಹದಿಂದ ನದಿ ಪಾತ್ರದ ಗ್ರಾಮಗಳಿಗೆ ನೀರು ನುಗ್ಗಿ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಜಿಲ್ಲೆಯಲ್ಲಿ ಅತಿವೃಷ್ಟಿ /ಡೋಣಿ ನದಿ ಪ್ರವಾಹ ಪಾತ್ರದಿಂದಾಗಿ ದೇ.ಹಿಪ್ಪರಗಿ ತಾಲ್ಲೂಕಿನ ಸಾತಿಹಾಳ ಗ್ರಾಮದ 25 ಮನೆಗಳಿಗೆ ನೀರು ನುಗ್ಗಿರುವುದಕ್ಕೆ ತಲಾ ರೂ 10,000/- ಗಳಂತೆ ಪರಿಹಾರವನ್ನು ನೀಡಲಾಗಿದೆ. |
| (ಇ) | ಡೋಣಿ ನದಿ ಪ್ರವಾಹದಿಂದ ಹಾನಿ ಆಗಿರುವ ಬೆಳೆಗಳೆಷ್ಟು; (ವಿವರ ನೀಡುವುದು) | ಡೋಣಿ ನದಿ ಪ್ರವಾಹದಿಂದ ಬೆಳೆ ಹಾನಿಯಾದ ತಾಲ್ಲೂಕುವಾರು ವಿವರವನ್ನು ಅನುಬಂಧ- 1 ರಲ್ಲಿ ಒದಗಿಸಲಾಗಿರುತ್ತದೆ. |
| ಈ) | ಸರ್ಕಾರ ಈವರೆಗೆ ನೀಡಿರುವ ಪರಿಹಾರದ ಮೊತ್ತವೆಷ್ಟು;? | ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ, ಅತಿವೃಷ್ಟಿ /ಡೋಣಿ ನದಿ ಪ್ರವಾಹ ಪಾತ್ರದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳು ಒಳಗೊಂಡಂತೆ ಹಾನಿಗೆ ಪರಿಹಾರವಾಗಿ ಇಲ್ಲಿಯವರೆಗೂ ಒಟ್ಟು 07 ಕಂತುಗಳಲ್ಲಿ ರೂ.3303.89 ಲಕ್ಷಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗಿದ್ದು, ಬಾಕಿ ಪರಿಹಾರ ಮೊತ್ತವನ್ನು ಜಮೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ನೇರವಾಗಿ ಫಲಾನುಭವಿಗಳಿಗೆ ಪರಿಹಾರ ಧನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ. |

*ಕಂಇ 543 ಡಿಎನ್ಆರ್ 2022*

**(ಆರ್. ಅಶೋಕ)**
ಕಂದಾಯ ಸಚಿವರು

# ಅನುಬಂಧ-1

| ಕ್ರ. ಸಂ | ತಾಲ್ಲೂಕು | ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿ ಕ್ಷೇತ್ರ (ಹೆ.ಗಳಲ್ಲಿ) | ಪರಿಹಾರ ತಂತ್ರಾಂಶದ ಮೂಲಕ ಒಟ್ಟು 7-ಕಂತುಗಳಲ್ಲಿ ಜಮೆಯಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | ಬಬಲೇಶ್ವರ | 745.76 | 106.69 |
| 2. | ಬ.ಬಾಗೇವಾಡಿ | 716.80 | 67.63 |
| 3. | ಚಡಚಣ | 2.50 | 0.40 |
| 4. | ದೇ.ಹಿಪ್ಪರಗಿ | 10070.00 | 78.69 |
| 5. | ಇಂಡಿ | 5.80 | 0.00 |
| 6. | ಕೊಲ್ಹಾರ | 25.08 | 2.97 |
| 7. | ಮುದ್ದೇಬಿಹಾಳ | 199.84 | 26.84 |
| 8. | ನಿಡಗುಂದಿ | 5.50 | 0.45 |
| 9. | ಸಿಂದಗಿ | 81.77 | 3.04 |
| 10. | ತಾಳಿಕೋಟೆ | 21063.27 | 2906.87 |
| 11. | ತಿಕೋಟಾ | 206.40 | 24.43 |
| 12. | ವಿಜಯಪುರ | 803.54 | 58.71 |
| 13. | ಆಲಮೇಲ | 243.93 | 27.17 |
| ಒಟ್ಟು | | 34170.19 | 3303.89 |

ಅಪರ ಜಿಲ್ಲಾಧಿಕಾರಿಗಳು
ವಿಜಯಪುರ ಜಿಲ್ಲೆ